## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಕರ್ಮದಲ್ಲಿನ ಅನುಸಂಧಾನಗಳು - 1 | 2 |
| ನಾಹಂ ಕರ್ತಾ | 6 |
| ಹರಿಃಕರ್ತಾ | 8 |
| ತತ್ಪೂಜಾ ಕರ್ಮ ಚಾಖಿಲಮ್ | 11 |
| ಸರ್ವಾಣಿ ಕರ್ಮಾಣಿ | 14 |

## ಕರ್ಮದಲ್ಲಿನ ಅನುಸಂಧಾನಗಳು - 1

ಸದಾಚಾರದ ಆಚರಣೆಯನ್ನು ಯಾಕಾಗಿ ಮಾಡಬೇಕು ಮತ್ತು ಸದಾಚಾರದ ಕುರಿತ ಗ್ರಂಥಗಳು ಯಾವುವು ಎನ್ನುವದನ್ನು ಹಿಂದಿನ ಲೇಖನದಲ್ಲಿ ಅರ್ಥ ಮಾಡಿಕೊಂಡೆವು. ಈ ಲೇಖನದಿಂದ ಸದಾಚಾರಸ್ಮೃತಿಯ ಅರ್ಥಾನುಸಂಧಾನ ಆರಂಭವಾಗುತ್ತದೆ.

ನಮಗೆ ಉಪಲಬ್ಧವಿರುವ ಸಕಲ ಸದಾಚಾರದ ಗ್ರಂಥಗಳಲ್ಲಿ ಸರ್ವೋತ್ತಮವಾದ ಗ್ರಂಥ ಶ್ರೀಮದಾಚಾರ್ಯರು ರಚನೆ ಮಾಡಿರುವ ಸದಾಚಾರಸ್ಮೃತಿ. ಬಾಯಲ್ಲಿ ಬ್ರಹ್ಮಾಂಡವನ್ನು ತೋರಿದ ಶ್ರೀಕೃಷ್ಣನಂತೆ ಈ ಪುಟ್ಟ ಕೃತಿಯಲ್ಲಿ ಆಚಾರ್ಯರು ಧರ್ಮಶಾಸ್ತ್ರದ ಸಕಲ ತತ್ವಗಳನ್ನೂ ತೋರಿದ್ದಾರೆ.

ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿನ ಮೂರು ಶ್ಲೋಕಗಳಲ್ಲಿ ಪರಮಾತ್ಮ, ಕರ್ಮಗಳ ಆಚರಣೆಯನ್ನು ಮಾಡುವ ಬಗೆ ಹೇಗೆ, ತಾನು ಹೇಳಿದಂತೆ ಮಾಡಿದರೆ, ಮಾಡದಿದ್ದರೆ ಉಂಟಾಗುವ ಫಲಗಳೇನು ಎನ್ನುವದನ್ನು ತಿಳಿಸಿ ಹೇಳಿದ್ದಾನೆ.

**ಮಯಿ ಸರ್ವಾಣಿ ಕರ್ಮಾಣಿ**
**ಸಂನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಭೂತ್ವಾ**
**ಯುಧ್ಯಸ್ವ ವಿಗತಜ್ವರಃ ।।**

**ಯೇ ಮೇ ಮತಮಿದಂ ನಿತ್ಯಂ**
**ಅನುತಿಷ್ಠಂತಿ ಮಾನವಾಃ ।**
**ಶ್ರದ್ಧಾವಂತೋಽನಸೂಯಂತೋ**
**ಮುಚ್ಯಂತೇ ತೇಽಪಿ ಕರ್ಮಭಿಃ ।।**

**ಯೇ ತ್ವೇತದಭ್ಯಸೂಯಂತೋ**
**ನಾನುತಿಷ್ಠಂತಿ ಮೇ ಮತಮ್ ।**
**ಸರ್ವಜ್ಞಾನವಿಮೂಢಾಂಸ್ತಾನ್**
**ವಿದ್ಧಿ ನಷ್ಟಾನಚೇತಸಃ ।।**

ಶ್ರೀಕೃಷ್ಣನ ಈ ಪವಿತ್ರ ವಾಣಿಗಳಲ್ಲಿ ಹುದುಗಿರುವ ಅರ್ಥಗಳನ್ನು ಹುದುಗಿಸಿ, ಕರ್ಮಗಳ ಆಚರಣೆಯ ಹಿಂದಿನ ಅನುಸಂಧಾನದ ರಹಸ್ಯವನ್ನು ತಿಳಿಸುತ್ತ ಆಚಾರ್ಯರು ಮಂಗಳಾಚಾರಣೆಯನ್ನು ಮಾಡುತ್ತಾರೆ.

**ಯಸ್ಮಿನ್ ಸರ್ವಾಣಿ ಕರ್ಮಾಣಿ**
**ಸಂನ್ಯಸ್ಯಾಧ್ಯಾತ್ಮಚೇತಸಾ**
**ನಿರಾಶೀಃ ನಿರ್ಮಮೋ ಯಾತಿ**
**ಪರಂ ಜಯತಿ ಸೋಽಚ್ಯುತಃ**

ನಮ್ಮನ್ನು ಸಂಸಾರದಿಂದ ಉದ್ಧರಿಸುವ ಅನುಸಂಧಾನವನ್ನು ತಿಳಿಸಿ ಹೇಳುವ ಶ್ಲೋಕವಿದು[1].

ಇದರಲ್ಲಿನ "ನಿರ್ಮಮಃ" ಮತ್ತು "ಸರ್ವಾಣಿ ಕರ್ಮಾಣಿ ಸಂನ್ಯಸ್ಯ" ಎನ್ನುವ ತತ್ವಗಳನ್ನು ಮೊದಲಿಗೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

ಈ ಶ್ಲೋಕ ಭಗವದ್ಗೀತೆಯ ಶ್ಲೋಕದ್ದೇ ಅನುಕೃತಿಯಾದ್ದರಿಂದ ಇಲ್ಲಿನ ಶಬ್ದಗಳಿಗೆ ಸ್ವಯಂ

---

[1] VNU181ರಲ್ಲಿ ಈ ಎರಡು ವಿಷಯದ ಕುರಿತ ವಿವರಣೆಯಿದೆ. ಆಲಿಸಿ.

ಶ್ರೀಮದಾಚಾರ್ಯರ ವ್ಯಾಖ್ಯಾನಗಳೇ ಉಪಲಬ್ಧವವೆ.

ನಿರ್ಮಮಃ ಎನ್ನುವ ಶಬ್ದಕ್ಕೆ ಆಚಾರ್ಯರು **“ನಿರ್ಮಮತ್ವಂ ನಾಹಂ ಕರೋಮೀತಿ ಜ್ಞಾನಮ್”** ಎಂದು ಗೀತಾಭಾಷ್ಯದಲ್ಲಿ ವ್ಯಾಖ್ಯಾನಿಸಿದ್ದಾರೆ. ಸಂನ್ಯಸ್ಯ ಎನ್ನುವದಕ್ಕೆ **“ಸಂನ್ಯಾಸಸ್ತು ಭಗವಾನ್ ಕರೋತೀತಿ ಜ್ಞಾನಮ್”** ಎಂದು ಅರ್ಥವನ್ನು ತಿಳಿಸುತ್ತಾರೆ.

ಗೀತಾತಾತ್ಪರ್ಯದಲ್ಲಿ ಬ್ರಹ್ಮತರ್ಕದ ಅರ್ಧಶ್ಲೋಕದಿಂದ ಈ ಎರಡು ತತ್ವಗಳನ್ನು ತಿಳಿಸುತ್ತಾರೆ —

**ನಾಹಂ ಕರ್ತಾ ಹರಿಃ ಕರ್ತಾ**
**ತತ್ಪೂಜಾ ಕರ್ಮ ಚಾಖಿಲಮ್ ।**

ಇಲ್ಲಿ “ನಾಹಂ ಕರ್ತಾ” ಎನ್ನುವದು “ನಿರ್ಮಮಃ” ಎನ್ನುವದರ ಅರ್ಥ. “ಹರಿಃ ಕರ್ತಾ, ತತ್ಪೂಜಾ ಕರ್ಮ ಚಾಖಿಲಮ್” ಎನ್ನುವದು ಸರ್ವಾಣಿ ಕರ್ಮಾಣಿ ಸಂನ್ಯಸ್ಯ ಎನ್ನುವದರ ಅರ್ಥ.

## ನಾಹಂ ಕರ್ತಾ

ನಾವು ಯಾವುದೇ ಕರ್ಮವನ್ನು ಮಾಡುವಾಗ ‘ನಾನು ಮಾಡಿದೆ, ನನ್ನ ಕೆಲಸವಿದು’ ಎಂದು ತಿಳಿಯುತ್ತೇವೆ. ವಸ್ತುಸ್ಥಿತಿಯಲ್ಲಿ ಇದು ಭ್ರಾಂತಿ.

ಜೀವ ಸರ್ವಾತ್ಮನಾ ಅಸ್ವತಂತ್ರನಾದವನು. ಇದು ನಮ್ಮ ಅನುಭವಕ್ಕೇ ಬಂದಿರುತ್ತದೆ. ಎಷ್ಟೋ ಬಾರಿ ಒಂದು ಕೆಲಸ ಮಾಡುವ ಮನಸ್ಸಿರುತ್ತದೆ. ಮಾಡುವ ಶಕ್ತಿ ದೇಹಕ್ಕಿರುತ್ತದೆ. ಕೆಲಸ ಮಾಡುವ ಪರಿಸರವಿರುತ್ತದೆ. ಆದರೂ ಸಹ ನಾವು ಆ ಕೆಲಸವನ್ನು ಮಾಡುವದಿಲ್ಲ. ಹಾಗೆಯೇ, ಮಾಡಬಾರದು ಎಂದುಕೊಂಡರೂ, ಕೆಲವು ಕೆಲಸಗಳನ್ನು ಮಾಡಿಬಿಟ್ಟಿರುತ್ತೇವೆ. ಇದರಿಂದ ಅತ್ಯಂತ ಸ್ಪಷ್ಟವಾಗಿ ತಿಳಿಯುವ ಅಂಶ, ನಮ್ಮ ಮನಸ್ಸಿನ ಮತ್ತು ದೇಹದ ಮೇಲೆ ನಮಗೆ ಹಿಡಿತವಿಲ್ಲ ಎಂದು. ನಮ್ಮನ್ನು ನಿಯಂತ್ರಿಸುತ್ತಿರುವ ಒಂದು ಮಹಾಶಕ್ತಿ ನಮ್ಮೊಳಗೇ ಇದೆ.

ಈ ತತ್ವದ ಕುರಿತು ಶಾಸ್ತ್ರಗ್ರಂಥಗಳಲ್ಲಿ ವಿಸ್ತಾರವಾದ ಚರ್ಚೆಯನ್ನು ಮಾಡಿ ನಿರ್ಣಯವನ್ನು

ನೀಡಿದ್ದಾರೆ. ಭಗವದ್ಗೀತೆ ಆ ನಿರ್ಣಯವನ್ನು ಅತ್ಯಂತ ಸರಳವಾಗಿ ನಿರೂಪಿಸಿದೆ —

> **ಈಶ್ವರಃ ಸರ್ವಭೂತಾನಾಂ**
> **ಹೃದ್ದೇಶೇಽರ್ಜುನ ತಿಷ್ಠತಿ ।**
> **ಭ್ರಾಮಯನ್ ಸರ್ವಭೂತಾನಿ**
> **ಯಂತ್ರಾರೂಢಾನಿ ಮಾಯಯಾ ॥**

ಯಾರ ಅಂಕೆಗೂ ಒಳಪಡದ, ಎಲ್ಲರನ್ನೂ ನಿಯಂತ್ರಣದಲ್ಲಿಟ್ಟುಕೊಂಡ ಶ್ರೀಹರಿ ಪ್ರತಿಯೊಬ್ಬ ಜೀವನ ಹೃದಯದಲ್ಲಿ ವಾಸವಾಗಿದ್ದಾನೆ. ಅವನೇ ಪ್ರತಿಯೊಬ್ಬರನ್ನೂ ಕರ್ಮಗಳಲ್ಲಿ ಪ್ರೇರಿಸುತ್ತಿದ್ದಾನೆ.

ನಾವು ಪ್ರತಿಯೊಂದು ಕರ್ಮವನ್ನು ಮಾಡುವಾಗಲೂ ಈ ಎಚ್ಚರವಿರಬೇಕು. ನಾನು ಅಸ್ವತಂತ್ರ. ಕರ್ಮಗಳನ್ನು ಸ್ವತಂತ್ರವಾಗಿ ಮಾಡಲು ಸರ್ವಾತ್ಮನಾ ಅಸಮರ್ಥ. ಶ್ರೀಹರಿಯೇ ಸ್ವತಂತ್ರಕರ್ತೃವಾದವನು. ನಾನಲ್ಲ.

## ಹರಿಃಕರ್ತಾ

ನಾನು ಸ್ವತಂತ್ರವಾಗಿ ಕರ್ತೃವಲ್ಲ. ಅಂದ ಮೇಲೆ ಈ ಕರ್ಮವನ್ನು ಮಾಡುತ್ತಿರುವವನು ಯಾರು? ಅಂತರ್ಯಾಮಿ. ಶ್ರೀಹರಿಯೇ ಕರ್ತೃ.

ಇಲ್ಲಿ ಮತ್ತೂ ಒಂದು ಅಂಶವನ್ನು ತಿಳಿಯಬೇಕು. ಪರಮಾತ್ಮ ನಮ್ಮ ಅಂತರ್ಯಾಮಿಯಾಗಿ ನಮ್ಮ ಹೃದಯಕಮಲದಲ್ಲಿದ್ದಾನೆ. ಅವನು ಬಿಂಬ. ನಾವು ಅವನ ಪ್ರತಿಬಿಂಬರು.

ಆ ಪರಮಾತ್ಮ ಮಹಾಲಕ್ಷ್ಮಿ, ಮುಖ್ಯಪ್ರಾಣ ಮತ್ತು ತತ್ವಾಭಿಮಾನಿ ದೇವತೆಗಳ ಮುಖಾಂತರ ನಮ್ಮಿಂದ ಕರ್ಮಗಳನ್ನು ಮಾಡಿಸುತ್ತಾನೆ.

ಅಂದರೆ ನಾವು ಕೈಗಳನ್ನು ಮುಗಿಯುತ್ತಿದ್ದೇವೆ ಎಂದರೆ ನಮ್ಮನ್ನು ನೇರವಾಗಿ ಪರಮಾತ್ಮ ಪ್ರೇರಿಸುತ್ತಿಲ್ಲ.

ಕೈಗಳನ್ನು ನಿಯಮಿಸುವ ದೇವತೆ ಇಂದ್ರ. ನಮ್ಮ ಕೈಗಳಲ್ಲಿ ಇಂದ್ರನ ಕೈಗಳಿವೆ. ಆ ಇಂದ್ರನ

ಕೈಗಳಲ್ಲಿ ಕ್ರಿಯೆ ಮೂಡಿದ್ದಕ್ಕಾಗಿ ನಮ್ಮ ಕೈಗಳಲ್ಲಿ ಕ್ರಿಯೆ ಮೂಡಿತು.

ಆ ಇಂದ್ರನ ಕೈಗಳಲ್ಲಿ ಪರಶಿವನ ಕೈಗಳಿವೆ. ಪರಶಿವನ ಕೈಗಳಲ್ಲಿ ಕ್ರಿಯೆ ಮೂಡಿದ್ದಕ್ಕಾಗಿ ಇಂದ್ರನ ಕೈಗಳಲ್ಲಿ ಕ್ರಿಯೆ ಮೂಡಿತು. ಆ ನಂತರ ನಮ್ಮಲ್ಲಿ.

ಆ ಪರಶಿವನ ಕೈಗಳಲ್ಲಿ ಮುಖ್ಯಪ್ರಾಣನ ಕೈಗಳಿವೆ. ಮುಖ್ಯಪ್ರಾಣನ ಕೈಗಳಲ್ಲಿ ಕ್ರಿಯೆ ಮೂಡಿದ್ದಕ್ಕಾಗಿ ಶಿವನ ಕೈಗಳಲ್ಲಿ ಕ್ರಿಯೆ ಮೂಡಿತು. ಆ ನಂತರ ಇಂದ್ರನಲ್ಲಿ. ಆ ನಂತರ ನಮ್ಮಲ್ಲಿ.

ಆ ಮುಖ್ಯಪ್ರಾಣನ ಕೈಗಳಲ್ಲಿ ಇಂದಿರಾದೇವಿಯ ಕೈಗಳಿವೆ. ಅವಳ ಕೈಗಳಲ್ಲಿ ಕ್ರಿಯೆ ಮೂಡಿದ್ದಕ್ಕಾಗಿ ಮುಖ್ಯಪ್ರಾಣನ ಕೈಗಳಲ್ಲಿ ಕ್ರಿಯೆ ಮೂಡಿತು. ಆ ನಂತರ ಶಿವನ ಕೈಯಲ್ಲಿ, ಆ ನಂತರ ಇಂದ್ರನ ಕೈಗಳಲ್ಲಿ. ಆ ನಂತರ ನಮ್ಮಲ್ಲಿ.

ಆ ಮಹಾಲಕ್ಷ್ಮೀದೇವಿಯ ಕೈಗಳಲ್ಲಿ ಅಂತರ್ಯಾಮಿಯಾದ ಭಗವಂತನ ಕೈಗಳಿವೆ. ಆ ಶ್ರೀಹರಿಯ ಕೈಗಳಲ್ಲಿ ಕ್ರಿಯೆ ಮೂಡಿದ್ದಕ್ಕಾಗಿ

ಲಕ್ಷ್ಮೀದೇವಿಯ ಕೈಗಳಲ್ಲಿ ಕ್ರಿಯೆ ಮೂಡಿತು. ಆ ನಂತರ, ವಾಯುವಿನ ಕೈಗಳಲ್ಲಿ, ಆ ನಂತರ ಶಿವನ ಕೈಗಳಲ್ಲಿ, ಆ ನಂತರ ಇಂದ್ರನ ಕೈಗಳಲ್ಲಿ, ಆ ನಂತರ ನಮ್ಮ ಕೈಗಳಲ್ಲಿ.

ಇಲ್ಲಿ ತಿಳಿಯಬೇಕಾದ ಇನ್ನೂ ಹೆಚ್ಚಿನ ಅಂಶಗಳಿವೆ. ಸುಲಭವಾಗಿ ಅರ್ಥವಾಗಲಿ ಎಂದು ಈ ದೃಷ್ಟಾಂತವನ್ನು ನೀಡಿದೆ.

ಆ ಪರಮಾತ್ಮನಲ್ಲಿ ಕ್ರಿಯೆಯನ್ನು ಯಾರೂ ಮೂಡಿಸುವದಿಲ್ಲ. ಅವನು ಸ್ವತಂತ್ರ. ತನ್ನ ಇಚ್ಛೆಯಂತೆ ನಮ್ಮ ಕರ್ಮ, ಸ್ವಭಾವಗಳಿಗೆ ಅನುಸಾರವಾಗಿ ನಮ್ಮಿಂದ ಕರ್ಮಗಳನ್ನು ಮಾಡಿಸುತ್ತಾನೆ.

ನಾವು ಪ್ರತಿಯೊಂದು ಕರ್ಮವನ್ನು ಮಾಡುವಾಗಲೂ ಈ ಎಚ್ಚರವಿರಬೇಕು.

ನಾಹಂ ಕರ್ತಾ, ನಾನು ಸ್ವತಂತ್ರ ಕರ್ತೃವಲ್ಲ. ಹರಿಃ ಕರ್ತಾ. ಶ್ರೀಹರಿಯೇ ಸ್ವತಂತ್ರ ಕರ್ತಾ. ಅವನು ದೇವತೆಗಳ ಮುಖಾಂತರ ನಮ್ಮಿಂದ ಕರ್ಮವನ್ನು ಮಾಡಿಸುತ್ತಾನೆ.

## ತತ್ಪೂಜಾ ಕರ್ಮ ಚಾಖಿಲಮ್

ನಾವು ದೇವರ ಪೂಜೆ ಎಂದರೆ ಸಾಲಿಗ್ರಾಮ ಪ್ರತಿಮೆಗಳಿಗೆ ಅಭಿಷೇಕ ಮಾಡುವದು, ನೈವೇದ್ಯ ಮಂಗಳಾರತಿ ಮಾಡುವದಷ್ಟೇ ಎಂದುಕೊಂಡಿದ್ದೇವೆ. ತಪ್ಪು.

ಅದು ದೇವರಪೂಜೆಯೇ. ಆದರೆ ಅದಷ್ಟೇ ದೇವರಪೂಜೆಯಲ್ಲ.

ಧರ್ಮ ಎನ್ನುವದು ಪರಮಾತ್ಮನ ಆಜ್ಞೆ. ಆ ಆಜ್ಞೆಯ ಪರಿಪಾಲನೆ, ಅರ್ಥಾತ್ ಪ್ರತಿಯೊಂದು ಧರ್ಮದ ಆಚರಣೆಯೂ ಭಗವಂತನ ಪೂಜೆಯೇ.

ಸ್ನಾನ ಮಾಡಬೇಕು, ಈ ಕ್ರಮದಲ್ಲಿ ಸ್ನಾನ ಮಾಡಬೇಕು ಎನ್ನುವದು ಭಗವಂತನ ಆಜ್ಞೆ. ಆ ಆಜ್ಞೆಯನ್ನು ಪರಿಪಾಲನೆ ಮಾಡುವದು, ಅರ್ಥಾತ್ ಶಾಸ್ತ್ರ ಹೇಳಿದ ಕ್ರಮದಲ್ಲಿ ಸ್ನಾನ ಮಾಡುವದೂ ಭಗವಂತನ ಪೂಜೆಯೇ ಆಗುತ್ತದೆ.

ಹೀಗೆ ಬೆಳಿಗ್ಗೆ ಎದ್ದು ದೇವರ ಸ್ಮರಣೆ ಮಾಡಿ, ದೇಹವನ್ನು ಸ್ವಚ್ಛಗೊಳಿಸುವದರಿಂದ ಆರಂಭಿಸಿ

ಪ್ರತೀನಿತ್ಯದ ಸಕಲಕರ್ಮಗಳನ್ನೂ, ರಾತ್ರಿ ನಿದ್ರೆ ಮಾಡುವದನ್ನೂ ಶ್ರೀಹರಿ ಆದೇಶಿಸಿದಂತೆ ಮಾಡಿದರೆ ಇಡಿಯ ದಿವಸದ ಎಲ್ಲ ಕರ್ಮಗಳೂ ಅವನ ಪೂಜೆಯೇ ಆಗುತ್ತದೆ. **ತತ್ಪೂಜಾ ಕರ್ಮ ಚಾಖಿಲಮ್**

ನೋಡಿ, ದೇವರ ಕಾರುಣ್ಯ ಎಷ್ಟು ಅದ್ಭುತವಾದದ್ದು. ನಾವು ದೇಹದ ಕೊಳೆಯನ್ನು ಕಳೆದುಕೊಳ್ಳಲು ಸ್ನಾನ ಮಾಡಲೇಬೇಕು. ಬದುಕಲು ತಿನ್ನಲೇ ಬೇಕು. ಬಾಯಾರಿದರೆ ನೀರು ಕುಡಿಯಲೇ ಬೇಕು. ಜೀವನ ಸಾಗಿಸಲು ಹಣ ಸಂಪಾದಿಸಲೇ ಬೇಕು.

ಇದೇ ಕರ್ಮಗಳನ್ನು — ಸ್ನಾನ, ಊಟ, ಸಂಪಾದನೆಗಳನ್ನು — ಶಾಸ್ತ್ರ ಆದೇಶಿಸಿದಂತೆ ಮಾಡಿಬಿಟ್ಟರೆ ಇದೇ ಸತ್ಕರ್ಮಗಳು ನಮ್ಮ ಮನಸ್ಸಿಗೆ ಶುದ್ಧಿ ನೀಡುವ ಮುಖಾಂತರ ಅಪರೋಕ್ಷಜ್ಞಾನಕ್ಕೆ ಕಾರಣವಾಗುತ್ತವೆ. ಮೋಕ್ಷಕ್ಕೆ ಕಾರಣವಾಗುತ್ತವೆ.

ಇಷ್ಟು ಸರಳವಾಗಿ ಮೋಕ್ಷಸಾಧನೆಯ ಮಾರ್ಗವನ್ನು ತಿಳಿಸಿ ಹೇಳಿದ ಶ್ರೀಮದಾಚಾರ್ಯರ

ಪಾದಗಳಿಗೆ ಸಾಷ್ಟಾಂಗಪ್ರಣತಿಗಳನ್ನು ಭಕ್ತಿಯಿಂದ ಸಮರ್ಪಿಸೋಣ.

ಇಲ್ಲಿ ಒಂದು ಎಚ್ಚರ ನಮಗಿರಬೇಕು. ನಾವು ಪಾಪಕರ್ಮಗಳನ್ನು ಮಾಡಲಿ, ಪುಣ್ಯಕರ್ಮಗಳನ್ನು ಮಾಡಲಿ ಅವನ್ನು ಮಾಡಿಸುವದು ಪರಮಾತ್ಮನೇ. ನಾವು ಸ್ವತಂತ್ರಕರ್ತೃವಲ್ಲ.

ಆದರೆ, ಪಾಪಕರ್ಮಗಳನ್ನು ಪರಮಾತ್ಮನ ಪೂಜೆ ಎಂದು ಸಮರ್ಪಿಸಬಾರದು. ಈರುಳ್ಳಿ ಬೆಳ್ಳುಳ್ಳಿಗ-ಳನ್ನು ತಿನ್ನಬೇಡ, ಸುಳ್ಳನ್ನು ನುಡಿಯಬೇಡ ಇತ್ಯಾದಿ ಭಗವಂತನ ಆಜ್ಞೆಯಿದೆ. ಆ ಹರಿಯ ಆಜ್ಞೆಯನ್ನು ಮೀರುವದು ಅವನ ಪೂಜೆ ಹೇಗಾಗಲು ಸಾಧ್ಯ.

ಪೂಜೆ ಎಂದರೆ ಗೌರವದ ಸಮರ್ಪಣೆ. ಆಜ್ಞೆಯನ್ನು ಪಾಲಿಸುವದು ಗೌರವದ ಸಮರ್ಪಣೆ-ಯಾಗುತ್ತದೆಯೇ ಹೊರತು ಆಜ್ಞೆಯ ಉಲ್ಲಂಘನೆ ಗೌರವ ಸಮರ್ಪಣೆಯಾಗುವದಿಲ್ಲ.

ಹೀಗಾಗಿ ಸತ್ಕರ್ಮಗಳ ಆಚರಣೆ ದೇವರ ಪೂಜೆಯಾಗುತ್ತದೆಯೇ ಹೊರತು ದೇವರೇ ಒಳಗೆ

ನಿಂತು ನಮ್ಮಿಂದ ಪಾಪ ಮಾಡಿಸುತ್ತಿದ್ದಾನೆ ಎಂಬ ಮಾತ್ರಕ್ಕೆ ಅದು ದೇವರ ಪೂಜೆಯಾಗುವದಿಲ್ಲ.

## ಸರ್ವಾಣಿ ಕರ್ಮಾಣಿ

ಹೀಗೆ ಸದಾಚಾರಸ್ಮೃತಿಯ

**ಯಸ್ಮಿನ್ ಸರ್ವಾಣಿ ಕರ್ಮಾಣಿ**
**ಸಂನ್ಯಸ್ಯಾಧ್ಯಾತ್ಮಚೇತಸಾ ।**
**ನಿರಾಶೀರ್ನಿರ್ಮಮೋ ಯಾತಿ**
**ಪರಂ ಜಯತಿ ಸೋಽಚ್ಯುತಃ ।।**

ಎಂಬ ಮೊದಲ ಶ್ಲೋಕದಲ್ಲಿನ ನಿರ್ಮಮಃ ಎನ್ನುವದಕ್ಕೆ ನಾಹಂ ಕರ್ತಾ ಎಂದೂ, ಸರ್ವಾಣಿ ಕರ್ಮಾಣಿ ಸಂನ್ಯಸ್ಯ ಎನ್ನುವದಕ್ಕೆ ಶ್ರೀಹರಿಯೇ ಸ್ವತಂತ್ರಕರ್ತಾ, ಈ ಸತ್ಕರ್ಮಗಳು ಅವನ ಪೂಜೆ ಎಂದೂ ಅರ್ಥ ಮಾಡಿಕೊಂಡೆವು.

ಈಗ ಈ ಶ್ಲೋಕದಲ್ಲಿನ ಸರ್ವಾಣಿ ಎನ್ನುವ ಶಬ್ದದ ಅರ್ಥಾನುಸಂಧಾನವನ್ನು ಮಾಡಬೇಕು.

ಆಚಾರ್ಯರ ಸದಾಚಾರಸ್ಮೃತಿ ಸಂಕ್ಷಿಪ್ತವಾದ ಧರ್ಮಶಾಸ್ತ್ರದ ಪುಟ್ಟಕೃತಿ.

ಇಷ್ಟು ಸಣ್ಣ ಕೃತಿಯಲ್ಲಿಯೂ ಸಹ ಆಚಾರ್ಯರು ಸರ್ವಾಣಿ ಎನ್ನುವ ಶಬ್ದವನ್ನು ಬಳಸುತ್ತಾರೆ. ಯಾವ ಕರ್ಮಗಳನ್ನು ಮಾಡಬೇಕು ಎಂದು ಪರಮಾತ್ಮ ನಮಗೆ ವಿಧಿಸಿದ್ದಾನೆಯೋ ಆ ಎಲ್ಲ ಕರ್ಮಗಳನ್ನೂ ಮಾಡಬೇಕು ಎಂದು ಅದರ ಅರ್ಥ.

ನಾವು ಮನುಷ್ಯರು ಬಹಳ ಆಲಸಿಗಳು. ಅದರಲ್ಲಿಯೂ ಧರ್ಮಾಚರಣೆಯ ವಿಷಯದಲ್ಲಿ ನಮ್ಮ ಸೋಮಾರಿತನ ಜಾಗೃತವಾಗಿಬಿಡುತ್ತದೆ. ನಾಕಾರು ಗಂಟೆಗಳ ಕಾಲ ಟೀವಿಯ ಮುಂದೆ ಅಲುಗಾಡದೇ ಕುಳಿತುಕೊಳ್ಳುವ ಮನುಷ್ಯನಿಗೆ ಹದಿನೈದು ನಿಮಿಷದ ಸಂಧ್ಯಾವಂದನೆಗೆ ಸಮಯವಿರುವದಿಲ್ಲ.

ತನಗೆ ಮಾಡಲು ಮನಸ್ಸಿಲ್ಲ ಎನ್ನುವ ಕಾರಣಕ್ಕೆ ಅವನು ಮಾಡುವ ಮತ್ತೊಂದು ಅಪರಾಧ — ಏನು ಇವೆಲ್ಲ ಮಾಡಿದರೇ ಭಗವಂತ ಒಲಿಯುತ್ತಾನಾ, ಮನಸ್ಸು ಶುದ್ಧವಿದ್ದರೆ ಸಾಕು ಇವೆಲ್ಲದರ

ಆವಶ್ಯಕತೆಯೇ ಇಲ್ಲ ಎಂದು ಅಹಂಕಾರದ ಮಾತುಗಳನ್ನಾಡುತ್ತಾನೆ.

ಅಂತಹವರಿಗೆ ಆಚಾರ್ಯರು ನೀಡಿದ ಉತ್ತರ — ಸರ್ವಾಣಿ ಎಂದು.

ಶ್ರೀಹರಿ ಎಷ್ಟು ಕರ್ಮಗಳನ್ನು ಮಾಡಬೇಕು ಎಂದು ನಮಗೆ ಆದೇಶಿಸಿದ್ದಾನೆಯೋ, ಅಷ್ಟೂ ಕರ್ಮಗಳನ್ನು ನಾವು ಆಚರಿಸಲೇ ಬೇಕು. ಸರ್ವಾಣಿ ಕರ್ಮಾಣಿ.

ಪರಮಾತ್ಮ ಆದೇಶಿಸಿದ ಕರ್ಮಗಳನ್ನು ಅನುಷ್ಠಾನ ಮಾಡಿದಾಗ ತಾನೇ ಮನಸ್ಸು ಶುದ್ಧವಾಗುವದು. ಆ ಕರ್ಮವನ್ನೇ — ಹರಿಯ ಆಜ್ಞೆಯನ್ನೇ — ಜರಿಯುವನ ಮನಸ್ಸು ಶುದ್ದ ಎಂದು ಹೇಗೆ ಒಪ್ಪುವದು.

ಮತ್ತೆ, ಆ ಕರ್ಮಗಳೇನು ಸಾಮಾನ್ಯ ಕರ್ಮಗಳೇ. ಬೆಳಗಿನ ಝಾವದ ಸಿಹಿನಿದ್ದೆಯನ್ನು ಬಿಟ್ಟು ಏಳಬೇಕು. ಛಳಿಯಲ್ಲಿ ಸ್ನಾನ. ಕಾಲು ಮಡಚಿ ಕುಳಿತು ಸಂಧ್ಯಾವಂದನೆ ದೇವರ ಪೂಜೆ. ನೆಲದ ಮೇಲೆ ಕುಳಿತು ಪೂಜಿಸುವದನ್ನೇ ಬಿಟ್ಟಮೇಲೆ

ಇವೆಲ್ಲ ಅತ್ಯಂತ ಕ್ಲಿಷ್ಟ. ಹೀಗೆ ಧರ್ಮವನ್ನು ಕಂಡರೆ ಮೂಗು ಮುರಿಯುವ ಜನರ ವಾದ ಬೆಳೆಯುತ್ತ ಸಾಗುತ್ತದೆ.

ಈ ಮಾತಿಗೆ ಪರಮಾತ್ಮ ನೀಡಿದ ಉತ್ತರವನ್ನು ಶ್ರೀ ರಾಘವೇಂದ್ರಸ್ವಾಮಿಗಳು ನಮಗೆ ಅರ್ಥ ಮಾಡಿಸುತ್ತಾರೆ.

ಕರ್ಮಗಳನ್ನು ಶ್ರದ್ಧೆಯಿಂದ ಮಾಡಬೇಕು, ಅಸೂಯಾರಹಿತರಾಗಿ ಮಾಡಬೇಕು ಎಂದು ಕೃಷ್ಣ ಹೇಳುತ್ತಾನೆ — ಶ್ರದ್ಧಾವಂತಃ ಅನಸೂಯಂತಃ.

ಇಲ್ಲಿನ ಅನಸೂಯಂತಃ ಎನ್ನುವ ಶಬ್ದಕ್ಕೆ ಟೀಕಾಕೃತ್ಪಾದರ ಸಮಗ್ರ ಕೃತಿಗಳನ್ನು ಮನಸ್ಸಿನಲ್ಲಿ ತುಂಬಿಸಿಕೊಂಡಿರುವ ಶ್ರೀ ರಾಘವೇಂದ್ರಸ್ವಾಮಿಗಳು ಅದ್ಭುತವಾದ ಅರ್ಥವನ್ನು ಬರೆಯುತ್ತಾರೆ — **ಕಷ್ಟೇ ಕರ್ಮಣಿ ಪ್ರವರ್ತಯತೀತಿ ಮಯಿ ದೋಷದೃಷ್ಟಿಮಕುರ್ವಂತಃ ಸಂತಃ** ಎಂದು.

ಕರ್ಮದ ಆಚರಣೆ ಮಾಡದಿದ್ದರೆ ದೋಷವಿದ್ದೇ ಇದೆ. ಆದರೆ, ಕರ್ಮದ ಆಚರಣೆಯನ್ನೂ ಮಾಡದೆ ಯಾರು ಆ ಕರ್ಮವನ್ನೇ ಕ್ಲಿಷ್ಟಕರ್ಮ, ಮಾಡಲಿಕ್ಕೆ

ಸಾಧ್ಯವಿಲ್ಲದ ಕರ್ಮ ಎಂದು ಜರಿಯುತ್ತಾರೆಯೋ ಅವರಿಗಾಗುವ ಅನರ್ಥಕ್ಕೆ ಕೊನೆಯಿಲ್ಲ.

**ಯೇ ತ್ವೇತದಭ್ಯಸೂಯಂತಃ**
**ನಾನುತಿಷ್ಠಂತಿ ಮೇ ಮತಮ್ ।**
**ಸರ್ವಜ್ಞಾನವಿಮೂಢಾಂಸ್ತಾನ್**
**ವಿದ್ಧಿ ನಷ್ಟಾನಚೇತಸಃ ॥**

**“ಅಭ್ಯಸೂಯಂತಃ ಕಷ್ಟಂ ಕರ್ಮೇತಿ ದೋಷದೃಷ್ಟಿಮಂತಃ”** (ರಾಘವೇಂದ್ರಸ್ವಾಮಿಗಳು)

ಈ ಧರ್ಮಗಳು ಕ್ಲಿಷ್ಟವಾದದ್ದು ಎಂದು ದೋಷಾರೋಪಣೆಯನ್ನು ಮಾಡಿ ಯಾರು ಧರ್ಮಾಚರಣೆ ಮಾಡುವದಲ್ಲವೋ ಅವರು ತಿಳಿಯಬೇಕಾದ ಪ್ರತಿಯೊಂದು ವಿಷಯದಲ್ಲಿಯೂ ಮೌಢ್ಯ ಮಿಥ್ಯಾಜ್ಞಾನಗಳನ್ನು ಪಡೆದು ವಿವೇಕಶೂನ್ಯರಾಗಿ ವಿನಾಶವಾಗುತ್ತಾರೆ.

ಧರ್ಮಗಳ ಕುರಿತು ಒಂದು ಸ್ಪಷ್ಟವಾದ ಮಾತಿದೆ — **“ನಾಶಕ್ಯೇ ಶಾಸ್ತ್ರಚೋದನಾ”** ಎಂದು.

ಸಾಧ್ಯವಿಲ್ಲದ್ದನ್ನು ಮಾಡು ಎಂದು ಪರಮಾತ್ಮ ಎಂದಿಗೂ ಆದೇಶಿಸುವದಿಲ್ಲ ಎಂದರ್ಥ.

ಪರಮಾತ್ಮ ಅನಂತ ಕರುಣೆಯ ಕಡಲು. ನಮ್ಮಿಂದ ಬೊಗಸೆಯಷ್ಟು ಕರ್ಮವನ್ನು ಮಾಡಿಸಿ ಸಮುದ್ರದಷ್ಟು ಸುಖವನ್ನು ನೀಡಬೇಕಾಗಿದೆ. ಹೀಗಾಗಿ, ನಮ್ಮಿಂದ ಯಾವುದು ಸಾಧ್ಯವೋ ಅದನ್ನೇ ಮಾಡಲು ಆದೇಶಿಸುತ್ತಿದ್ದಾನೆ.

ಅವನು ಆದೇಶಿಸಿದ ಕರ್ಮಗಳನ್ನು ಶ್ರದ್ಧೆಯಿಂದ ಮಾಡಿದಲ್ಲಿ, ಕಾಮ ಕ್ರೋಧಗಳ ಕೊಚ್ಚೆಯಿಂದ ಮಲಿನವಾದ ಮನಸ್ಸೆಂಬ ಕನ್ನಡಿ ಸ್ವಚ್ಛವಾಗುತ್ತದೆ.

ಪರಮಾತ್ಮನ ಅನುಗ್ರಹದಿಂದ ಶಾಸ್ತ್ರದ ಜ್ಞಾನ ಮೂಡಿ ಆ ಅಂತರ್ಯಾಮಿ ಆ ಶುಭ್ರ ಮನಸ್ಸಿನಲ್ಲಿ ಪ್ರತಿಫಲಿತನಾಗುತ್ತಾನೆ.

ತನ್ನ ಸಾಕ್ಷಾತ್ಕಾರವನ್ನು ನಮಗೆ ನೀಡಿ ಮೋಕ್ಷವನ್ನು ಕರುಣಿಸಿ ಎಂದೆಂದಿಗೂ ನಾಶವಿಲ್ಲದ ಆನಂದವನ್ನು ನೀಡುತ್ತಾನೆ.

ಹೀಗಾಗಿ, ನಮಗೆ ವಿಹಿತವಾದ ಪ್ರತಿಯೊಂದು ಧರ್ಮವನ್ನೂ, ಶ್ರೀಹರಿ ನನ್ನಲ್ಲಿ ನಿಂತು ಮಾಡಿಸುತ್ತಿದ್ದಾನೆ, ಅವನೇ ಸ್ವತಂತ್ರ ಕರ್ತಾ, ನಾನು ಸ್ವತಂತ್ರಕರ್ತೃವಲ್ಲ, ಈ ಸತ್ಕರ್ಮದ ಆಚರಣೆಯೇ ಅವನ ಪೂಜೆ ಎಂಬ ಅನುಸಂಧಾನದೊಂದಿಗೆ ಮಾಡಿ ಆ ಭಗವಂತನಿಗೆ ಅರ್ಪಿಸಬೇಕು, ಅರ್ಪಿಸಿ ಧನ್ಯರಾಗಬೇಕು.

ಧರ್ಮವನ್ನು, ಸತ್ಕರ್ಮವನ್ನು ಜರಿಯುವ ಜನರಿಂದ ದೂರವಾಗುವಂತಾಗಲಿ, ತಾವು ಮಾಡುವ ಅನಾಚಾರವನ್ನೂ ಧರ್ಮ ಎಂದು ಬಿಂಬಿಸುವ ಧೂರ್ತರ ಹತ್ತಿರ ಇರದಂತಾಗಲಿ, ಪರಮಾತ್ಮನ ಮಾತಿನಲ್ಲಿ ಶ್ರದ್ಧೆಯನ್ನಿಟ್ಟು ಧರ್ಮವನ್ನಾಚರಿಸುವಂತಾಗಲಿ ಎಂದು ಮಧ್ವೇಶಕೃಷ್ಣನನ್ನು ಭಕ್ತಿಯಿಂದ ಪ್ರಾರ್ಥಿಸೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491